# ಕನ್ನಡ ಮಹಿಳಾ ಕಾವ್ಯದಲ್ಲಿ ಗಾಂಧಿ ಮತ್ತು ಅಂಬೇಡ್ಕರ್

**ಕುಮಾರ ಇಂದ್ರಬೆಟ್ಟ**

ಸಹಾಯಕ ಪ್ರಾಧ್ಯಾಪಕರು, ಸೈಂಟ್ ಕ್ಲಾರೆಟ್ ಕಾಲೇಜು ಸ್ವಾಯತ್ತ, ಜಾಲಹಳ್ಳಿ, ಬೆಂಗಳೂರು.

**DOI: https://doi.org/10.5281/zenodo.18788109**

## ABSTRACT:

ಪ್ರಸ್ತುತ ಪ್ರಬಂಧವು ಕನ್ನಡದ ಹೊಸ ತಲೆಮಾರಿನ ಮಹಿಳಾ ಕವಯಿತ್ರಿಯರು ಚಾರಿತ್ರಿಕ ಪುರುಷರಾದ ಗಾಂಧಿ ಮತ್ತು ಅಂಬೇಡ್ಕರ್ ಅವರ ವ್ಯಕ್ತಿತ್ವಗಳನ್ನು ಕಾವ್ಯದ ಮೂಲಕ ಗ್ರಹಿಸಿರುವ ಭಿನ್ನ ದೃಷ್ಟಿಕೋನಗಳನ್ನು ಚರ್ಚಿಸುತ್ತದೆ. ಸಾಂಪ್ರದಾಯಿಕ ಇತಿಹಾಸವು ಈ ಮಹನೀಯರನ್ನು ಕೇವಲ 'ಮಹಾತ್ಮ' ಅಥವಾ 'ದೇವ ಸಮಾನ' ವ್ಯಕ್ತಿಗಳಾಗಿ ಚಿತ್ರಿಸಿದರೆ, ಮಹಿಳಾ ಕಾವ್ಯವು ಅವರ ತತ್ವಗಳನ್ನು ವರ್ತಮಾನದ ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿಸುತ್ತದೆ. ಗಾಂಧೀಜಿಯ ಅಹಿಂಸೆಯ ತತ್ವವು ಇಂದಿನ ಹಿಂಸಾತ್ಮಕ ಜಗತ್ತಿನಲ್ಲಿ ಪ್ರತಿಮೆಯಾಗಿ ಸೀಮಿತಗೊಳ್ಳುತ್ತಿರುವುದನ್ನು ವ್ಯಂಗ್ಯವಾಡುವುದು ಮತ್ತು ಅಂಬೇಡ್ಕರ್ ಅವರ ಸಾಂವಿಧಾನಿಕ ಆಶಯಗಳು ಕೇವಲ ದಲಿತರಿಗೆ ಮಾತ್ರವಲ್ಲದೆ ಇಡೀ ಮಹಿಳಾ ಕುಲಕ್ಕೆ ಬಿಡುಗಡೆಯ ಹಾದಿಯಾಗಿದೆ ಎಂದು ಈ ಕಾವ್ಯಗಳು ಧ್ವನಿಸುತ್ತವೆ. ಇತಿಹಾಸವನ್ನು ಮರುಚಿಂತನೆಗೆ ಒಳಪಡಿಸುವ ಈ ಕ್ರಮವು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ನೀಡಿದೆ.

## KEYWORDS:

ಗಾಂಧಿ, ಅಂಬೇಡ್ಕರ್, ಸ್ತ್ರೀವಾದಿ ದೃಷ್ಟಿಕೋನ, ಅಹಿಂಸೆ, ಸಂವಿಧಾನ, ಶೋಷಣೆ ಮತ್ತು ಸ್ವಾಭಿಮಾನ.

ಕನ್ನಡ ಮಹಿಳಾ ಕಾವ್ಯವು ಪುರಾಣ ಪಾತ್ರಗಳನ್ನು, ಪ್ರಸಂಗಗಳನ್ನು ಹೇಗೆ ಪುನರ್ವ್ಯಾಖ್ಯಾನಕ್ಕೆ ಒಳಪಡಿಸಿತೋ ಹಾಗೆಯೇ ಚಾರಿತ್ರಿಕ ವ್ಯಕ್ತಿತ್ವಗಳನ್ನು ಸಹ ತಮ್ಮ ಕಾವ್ಯಗಳಲ್ಲಿ ಪುನರ್ವ್ಯಾಖ್ಯಾನಕ್ಕೆ ಒಳಪಡಿಸಿದೆ. ಬುದ್ಧ, ಗಾಂಧಿ, ಅಂಬೇಡ್ಕರ್, ನೆಲ್ಸನ್ ಮಂಡೇಲಾ ಮೊದಲಾದವರನ್ನು ಮುಖಾಮುಖಿಯಾಗಿಸುವಾಗ ವ್ಯಕ್ತಿತ್ವಗಳನ್ನು ಗ್ಲೋರಿಫೈ (Glorify) ಮಾಡುವುದು ಒಂದು ಬಗೆಯದ್ದಾದರೆ, ಚಾರಿತ್ರಿಕವಾಗಿ ಸಿಗದ ವಿಚಾರಗಳನ್ನು ಕಾವ್ಯದ ಮೂಲಕ ಕಟ್ಟಿಕೊಡುವ ಮತ್ತೊಂದು ನೋಟಕ್ರಮವನ್ನು ಕವಯಿತ್ರಿಯರು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಕೇವಲ ಚಾರಿತ್ರಿಕ ವ್ಯಕ್ತಿಗಳನ್ನಷ್ಟೇ ಮರು ನಿರೂಪಿಸಿಲ್ಲ, ಹಲವಾರು ಪ್ರಸಂಗಗಳನ್ನು, ಸ್ವಾತಂತ್ರ್ಯ ಹೋರಾಟಗಾರರನ್ನೂ ಸಹ ತಮ್ಮ ಕಾವ್ಯದ ತೆಕ್ಕೆಗೆ ಎಳೆದು ತಂದಿದ್ದಾರೆ. ಪ್ರಸ್ತುತ ಈ ಪ್ರಬಂಧದಲ್ಲಿ ಚಾರಿತ್ರಿಕವಾಗಿ ಮಹತ್ವವನ್ನು ಪಡೆದುಕೊಂಡಿರುವ ಬುದ್ಧ, ಅಂಬೇಡ್ಕರ್, ಗಾಂಧಿ ಈ ಮೂರೂ ವ್ಯಕ್ತಿತ್ವಗಳನ್ನು ಕನ್ನಡ ಮಹಿಳಾ ಕಾವ್ಯವು ನೋಡಿರುವ ಕ್ರಮ ಯಾವುದು ಎಂಬುದನ್ನು ಕವಿತೆಗಳ ಮೂಲಕ ಅದರ ಆಳ ಅಗಲಗಳನ್ನು ದರ್ಶಿಸುವುದು ಇಲ್ಲಿಯ ಆಶಯವಾಗಿದೆ.

**ಗಾಂಧೀಜಿ**

'ಗಾಂಧಿ' ಎಂಬುದು ಒಂದು ಹೆಸರು, ತತ್ವ, ಸಿದ್ಧಾಂತ, ಶಕ್ತಿ, ಮಾರ್ಗ ಹಾಗೂ ಅದೊಂದು ರೂಪಕ, ಸಂಕೇತ. ಇಪ್ಪತ್ತನೇ ಶತಮಾನದಲ್ಲಿ ಬದುಕಿ ಬಾಳಿದ ಗಾಂಧಿ ಇಂದಿಗೂ ಒಂದಲ್ಲ ಒಂದು ರೂಪದಲ್ಲಿ ಮತ್ತೆ ಮತ್ತೆ ಹುಟ್ಟುತ್ತಿದ್ದಾರೆ. "ಒಂದು ಮಗು ಕೂಡ ಪುಟ್ಟ ಬೆರಳಿನಿಂದ ಉಸುಕಿನಲ್ಲಿ ಗೆರೆ ಎಳೆದು ಗಾಂಧಿಯ ಚಿತ್ರ ಮೂಡಿಸಬಲ್ಲ. ಅಂತಹ ಸರಳ ವ್ಯಕ್ತಿತ್ವ, ಕಡ್ಡಿಯಂಥ ಮೈ, ಬೋಳುತಲೆ, ಅಗಲ ಕಿವಿ, ಚಾಳೀಸು, ಹುಟ್ಟು ನಗೆ, ಅರೆ ಬೆತ್ತಲ ಫಕೀರನಂತೆ ಪೋಷಾಕು, ಕನ್ನಡಿ ಹರಳಿನಂಥ ನೇರ ಮಾತು, ನೇರ ನಡೆ, ಅಂತರಂಗದ ಧ್ವನಿ ಅಂತ ಹೇಳಿ ಅದನ್ನೇ ಸಾರ್ವಜನಿಕ ಅಭಿಪ್ರಾಯವಾಗಿ ಮಾರ್ಪಡಿಸಬಲ್ಲ ಮೋಡಿಗಾರ, ಉಪವಾಸ, ಗಿಪವಾಸ ಅಂತ ಹಟಕ್ಕೆ ಬಿದ್ದು ತನ್ನದನ್ನು ಸಾಧಿಸಿಕೊಳ್ಳಬಲ್ಲ ಛಲಗಾರ,"[1] ಹೀಗೆಲ್ಲ ಆಗಿದ್ದ ಗಾಂಧಿ ಹಲವು ಕಲಾ ಪ್ರಕಾರಗಳಲ್ಲಿ ಮೂಡಿಬಂದಿದ್ದಾನೆ. ಅದರಲ್ಲಿ ಸಾಹಿತ್ಯವೇನು ಹೊರತಲ್ಲ.

ನವೋದಯ ಕಾಲದ ಗೋವಿಂದ ಪೈ ಅವರಿಂದ ಹಿಡಿದು ಇತ್ತೀಚೆಗೆ ಬರೆಯುತ್ತಿರುವ ಮಂಜುಳಾ ಹುಲಿಕುಂಟೆ, ಸುಜಾತ ಚಲವಾದಿ, ಚೇತನ ತೀರ್ಥಹಳ್ಳಿ ಮೊದಲಾದವರವರೆಗಿನ ಕನ್ನಡ ಕಾವ್ಯ ಪರಂಪರೆಯಲ್ಲಿ ಗಾಂಧೀಯು ಹಲವು ಬಗೆಯಲ್ಲಿ ಅನಾವರಣಗೊಳ್ಳುತ್ತಾ ಬಂದಿದ್ದಾರೆ. ಇದರ ಭಾಗವಾಗಿಯೇ ಹೊಸ ತಲೆಮಾರಿನ ಮಹಿಳಾ ಕಾವ್ಯವು ಗಾಂಧಿಯನ್ನು ಕಂಡಿರುವ ನೋಟ ಕ್ರಮವು ಈ ಹಿಂದಿನ ತಲೆಮಾರಿನ ನೋಟ ಕ್ರಮಕ್ಕಿಂತ ಭಿನ್ನವಾಗಿದೆ. ನವೋದಯದ ಕವಿಗಳು ಗಾಂಧಿಯನ್ನು ಹತ್ತಿರದಿಂದ ಕಂಡವರಾಗಿದ್ದರು. ಆದ್ದರಿಂದ ಆಗ ಬರೆಯುತ್ತಿದ್ದ ಕವಿಗಳು ಗಾಂಧಿಯನ್ನು ಸ್ವಾತಂತ್ರ್ಯ ಚಳುವಳಿಯ ಮುಂಚೂಣಿ ನಾಯಕನಾಗಿ,

ಗಾಂಧಿಯ ವೈಯಕ್ತಿಕ ಬದುಕಿನ ಹಲವು ಎಳೆಗಳನ್ನು ಬಿತ್ತರಿಸುವ ತೆರನಾಗಿ ಕಾವ್ಯ ಮೂಡಿ ಬರುತ್ತಿತ್ತು. ಕಾಲ ಬದಲಾದಂತೆ ಗಾಂಧಿ ಸಂಕೇತವಾಗಿ ಬಳಸಲ್ಪಡುತ್ತಾ ಬಂದರು. ಇಂದು ನವನಾಗರಿಕತೆಯ ಸಂದರ್ಭದಲ್ಲಿ 'ಗಾಂಧಿ' ಎಂಬ ಹೆಸರು ಅಪಹಾಸ್ಯಕ್ಕೆ ಒಳಗಾಗುವಂತೆ ವ್ಯಂಗ್ಯ ಮೂರ್ತಿಯನ್ನಾಗಿ ಕಾಣಲಾಗುತ್ತಿದೆ. ಹೀಗೆ ಭಾರತಕ್ಕೆ ಅಹಿಂಸಾ ಮಾರ್ಗದ ಮೂಲಕ ತನ್ನದೇ ಆದ ಅಸ್ತಿತ್ವವನ್ನು ದೊರಕಿಸಿಕೊಟ್ಟ ವ್ಯಕ್ತಿತ್ವವನ್ನಿಂದು ಅಪಹಾಸ್ಯಕ್ಕೆ ಒಳಗುಮಾಡಲಾಗುತ್ತಿದೆ ಎಂಬುದನ್ನು ಹೊಸ ತಲೆಮಾರಿನ ಮಹಿಳಾ ಕಾವ್ಯ ತೆರೆದಿಡುತ್ತದೆ. ಉದಾಹರಣೆಗೆ ಪೂರ್ವಸೂರಿ ಕವಯಿತ್ರಿಯಾದ ಬೆಳಗೆರೆ ಜಾನಕಮ್ಮ ಅವರು ಗಾಂಧಿ ಬಗೆಗೆ ಬರೆದ ಕವಿತೆ ಹೀಗಿದೆ:

**ಕರ್ಮಯೋಗಿ ಗಾಂಧೀಜಿ**

**"ಚಿದ್ರೂಪನಂತೆ ತೊಳತೊಳಗಿ ಬೆಳಗುತಿಹ**
**ದಿವ್ಯಜ್ಞಾನಿ ತಾತ**
**ಸದ್ಗುಣದ ಕಣಿಯು ಬಹುಪೂಜ್ಯನೆಂದು ಮನ**
**ಗಂಡೆನೆಂದೊ ಪೂತ**
**ನಿಜ ತತ್ವ ಏರಿತು ಗುರು ಪೀಠವೇರಿ ಮೆರೆದಿರುವ**
**ಕರ್ಮಯೋಗಿ**
**ವಿಜಯವನುಗೈದೆ ಅದ್ವೈತದೊಳಗೆ ಬಿಡು**
**ನೀನೆ ಪರಮ ತ್ಯಾಗಿ**
**ಇಂದ್ರಿಯವ ಜಯಿಸಿ ಬಂಧನ ಹಾಯ್ದೆ ಆ-**
**ನಂದಮಯನು ನೀನು**
**ಬಂಧನದಿ ಬೆಂದ ಜಡಮತಿಯು ನಾನು ಏ-**
**ನೆಂದು ಬಣ್ಣಿಸುವೆನು**
**ಪರಮಾತ್ಮಾ ತನ್ನ ಮಡಿಲೊಳಗೆ ನಿನ್ನ ಲಾ-**
**ಲಿಸುತ ತೂಗುತಿಹನೊ**
**ಪರವಸ್ತುವಿಲ್ಲ ಪರಮಾತ್ಮ ತಾನೇ ತಾನೆನುತ**
**ಸುಮ್ಮನಿಹೆಯೊ**
**ಸೌಂದರ್ಯ ಸುಗುಣ ನಿರ್ಗುಣನು ಸಕಲ ಚೈ-**
**ತನ್ಯ ತಪಸಿಯವನು**
**ಆನಂದಮಯನು ಸರ್ವಾತ್ಮನಾಗಿ ತಾ-**
**ನಿಲ್ಲಿ ನಲಿಯುತಿಹನು**
**ಘನ ಶಾಂತಿಯೊಂದು ನಿನ್ನೊಳಗೆ ತುಂಬಿ ಕಿರು**
**ನಗೆಯ ಸೂಸುತಿಹುದು**
**ಜನಕಜೆಯ ಮನವು ಗಾಂಧೀಜಿ ನಿಮ್ಮ ಬಳಿ**
**ಬಳಿಯೇ ಸುತ್ತುತಿಹುದು"[2]**

ಬೆಳಗೆರೆ ಜಾನಕಮ್ಮನವರು ಗಾಂಧಿಯ ವ್ಯಕ್ತಿತ್ವದ ಕುರಿತಾಗಿ ಈ ಕವಿತೆಯಲ್ಲಿ ಬರೆದಿದ್ದಾರೆ. ಇಡೀ ಕವಿತೆಯು ಗಾಂಧಿಯು ಪಡೆದ ಜ್ಞಾನ, ನಡೆದ ಮಾರ್ಗ, ಮಾಡಿದ ತ್ಯಾಗ, ಏರಿದ ಎತ್ತರ, ಕೊಟ್ಟ ತತ್ವ ಮತ್ತು ಚಿಂತನೆಗಳನ್ನು ಸರಳವಾದ ಭಾಷಾಭಿವ್ಯಕ್ತಿಯ ಕ್ರಮದಲ್ಲಿ ಮಂಡಿಸಿದ್ದಾರೆ. ಇದು ನವೋದಯ ಕಾಲಘಟ್ಟದಲ್ಲಿ

ಅದರಲ್ಲಿಯೂ ಒಬ್ಬ ಕವಯಿತ್ರಿಯು ಬರೆದ ಕವಿತೆಯಾಗಿದೆ. ಸಹಜವಾಗಿಯೇ ನವೋದಯದ ಕಾವ್ಯ ಪರಂಪರೆಯ ಹಿನ್ನೆಲೆಯಲ್ಲಿಯೂ ಪ್ರಸ್ತುತ ಈ ಕವಿತೆ ಹರಡಿಕೊಂಡಿರುವುದು ಕಂಡು ಬರುತ್ತದೆ. ಇದು ಮಹಿಳಾ ಕಾವ್ಯವು ಗಾಂಧಿಯನ್ನು ಕಂಡದ್ದು ಒಂದು ಬಗೆಯದ್ದಾದರೆ, ನವೋದಯೋತ್ತರದ ಘಟ್ಟದಲ್ಲಿ/ ನವ್ಯ ಕಾಲ ಘಟ್ಟದಲ್ಲಿ ಸರಸ್ವತಿ ಚಿಮ್ಮಲಗಿ, ಶಶಿಕಲಾ ವೀರಯ್ಯಸ್ವಾಮಿ, ಮಾಧವಿ ಭಂಡಾರಿ, ಎಂ. ಎಸ್. ವೇದ, ಪ್ರತಿಭಾ ನಂದಕುಮಾರ್, ಕೆ. ಷರೀಫಾ, ಸವಿತಾ ನಾಗಭೂಷಣ ಮೊದಲಾದವರು ಗಾಂಧಿ ಕುರಿತು ಕವಿತೆಗಳನ್ನು ಬರೆದಿದ್ದಾರೆ. ದಲಿತ ಬಂಡಾಯ ಕಾಲದಲ್ಲಿ ಎಂ. ವಿ. ಸರಸ್ವತೀಗೌಡ, ವಿಜಯಶ್ರೀ ಸಬರದ, ಹೆಚ್.ಎಸ್. ಸುಜಾತ, ಶೈಲಾ ವಸಂತ, ಲತಾ ಗುತ್ತಿ, ಎಸ್. ಮಾಲತಿ ಮೊದಲಾದವರು ಈ ಕುರಿತು ಕವಿತೆಗಳನ್ನು ರಚಿಸಿದ್ದಾರೆ. ಮತ್ತೆ ಇತ್ತೀಚೆಗೆ ಸೌಮ್ಯ ಕೆ. ಆರ್., ಮಮತಾ ಆರ್. ಮೊದಲಾದವರು ಗಾಂಧಿ ಕುರಿತು ಬರೆದಿದ್ದಾರೆ.

ಪ್ರತಿಭಾ ನಂದಕುಮಾರ್ ಅವರ ಕವಿತೆ 'ಗನ್ನು ಮತ್ತು ಗಾಂಧಿ'ಯು ಇಂದಿನ ಅದೇ ದ್ವೇಷ ಮುಂದುವರೆಯುತ್ತಿರುವ ಸಂದರ್ಭಗಳನ್ನು ಪ್ರಸ್ತುತ ಕವಿತೆಯಲ್ಲಿ ಮನಗಾಣಿಸುತ್ತದೆ.

"ಬೋ ಪರಾಕು ಗಾಂಧೀ ಮಹಾತ್ಮನಿಗೆ ಶಾಂತಿ ದೂತನಿಗೆ ಬೋ ಪರಾಕಿನ ಷಹೀದನಿಗೆ ಏನಿಲ್ಲದ ಫಕೀರನಿಗೆ ಗುಂಡಿಗೂ ಗಾಂಧೀಗೂ ಎಲ್ಲಿಲ್ಲದ ನಂಟು ಗನ್ನಿಗೂ ಗಂಟೆಗೂ ಸಂಬಂಧವುಂಟು ಪುಟಿ ಪುಟಿದು ಮತ್ತೆ ಬಂದು ಬಡಿದು ಮಂಡಿಸಲಾಗದೆ ಬಿಚ್ಚಿ ಬಯಲಾಗಿ ನಿಂದು ತಾತನಿರಲಿ ತಾಯಿಯರಲಿ ಎದೆಗೆ ತಾಗಿ ಕುಸಿದರು ಭೂಮಿಗೆ ಜೀವ ನಶ್ವರವಾಗಿ ಇಂದಿಗೂ ಗನ್ನು ವಿವಾದಗಳ ಚೆಂಡು ಗುಂಡು ಹಾರುವ ಮೊದಲೇ ಚೆದುರಿತು ದಂಡು ಹಾರಾಟ ಚೀರಾಟವೆಲ್ಲ ವಿಫಲ ತಿರುಮಂತ್ರ ತಲೆ ಉಳಿಸಿಕೊಳ್ಳಲು ಇರವುಕೊಂದೇ ತಂತ್ರ ಗನ್ನಿರಲಿ ಗಂಟಿರಲಿ ವಿವಾದಗಳಿರಲಿ ಗಾಂಧೀ ನಗೆ ಮಾಸದಿರಲಿ ಪರ್ವತುಂಬಿ ತುಳಕಲಿ ಅಂದಿಗೂ ಇಂದಿಗೂ ಗಾಂಧಿರಾಜ್ಯ ಆದರೂ ಬಗೆ ಹರಿದಿಲ್ಲ ವ್ಯಾಜ್ಯ"[3]

ಇಂದು ಗಾಂಧಿಯನ್ನು ಕೊಂದವರೇ 'ಗಾಂಧಿ ರಾಜ್ಯ'ದ ಅಧಿಪತಿಗಳಾಗಿರುವಾಗ ಮತ್ತೆ ಮತ್ತೆ ಗನ್ನು ಸದ್ದು ಮಾಡುತ್ತಲೇ ಇರುತ್ತದೆ.

**'ಗಾಂಧಿ' ಎಂಬ ಕವಿತೆಯಲ್ಲಿ ಮಮತಾ ಆರ್. ರವರು ಹೀಗೆ ಬರೆಯುತ್ತಾರೆ:**

**"ಎಲ್ಲ ಧರ್ಮದವರು ಅವನನ್ನು**
**ದೂರವಿಟ್ಟುದಕ್ಕಾಗಿ ದೇವರು ಅವನನ್ನು**
**ತನ್ನ ಮಗನಾಗಿ ಮಾಡಿಕೊಂಡ**
**ಎಂದು ಸ್ವರ್ಗದಲ್ಲೆಲ್ಲ ಸಾರಲ್ಪಟ್ಟಿತು**
**ಭೂಮಿಯಲ್ಲಿ ಅದು ಸುದ್ದಿಯಾಗಲೇಯಿಲ್ಲ**
**ಅವನು ಮುಸಲ್ಮಾನರ ಪರ ಎಂದು**
**ವಿಷಾದಿಸಿದರು ಹಿಂದೂಗಳು**
**ಎಲ್ಲಕ್ಕಿಂತ ಮೊದಲು ಅವನೊಬ್ಬ ಹಿಂದೂ**

**ಎಂದು ತೀರ್ಮಾನಿಸಿದರು ಮುಸಲ್ಮಾನರು**
**ದೇವರ ಮಗ ಭೂಮಿಯ ಮೇಲೆ ಅನುಮಾನಿಸಲ್ಪಟ್ಟಿದ್ದು**
**ಇದು ಮೊದಲಬಾರಿಗೇನೂ ಆಗಿರಲಿಲ್ಲ''[4]**

**''ಅವ ಒಬ್ಬ ಮನುಷ್ಯ ಅಲ್ಲ**
**ಹಾಗಾಗಿ ಒಂದು ಗುಂಡು**
**ಅವನ ಉರುಳಿಸಲು ಸಾಧ್ಯವಿಲ್ಲ''[5]**

ಗಾಂಧಿಯನ್ನು ದೈವತ್ವಕ್ಕೆ ಕೊಂಡೊಯ್ದಿರುವ ಪರಿ ಹಾಗೂ ಹಿಂದೂ ಮತ್ತು ಮುಸ್ಲಿಮರಿಬ್ಬರೂ ಆತನನ್ನು ಅನುಮಾನದಿಂದ ನೋಡುತ್ತಿರುವುದು – ಈ ಎರಡೂ ವೈರುಧ್ಯಗಳನ್ನು ಈ ಕವಿತೆ ಕಟ್ಟಿಕೊಡುತ್ತದೆ. ಇಡೀ ಮನುಕುಲವನ್ನು ಮಾನವೀಯತೆಯ ದಾರಿಯಲ್ಲಿ ಸಾಗಿಸಲು ಬಂದ ಪ್ರವಾದಿಗಳನ್ನು ಈ ಅಮಾನವೀಯ ಸಮಾಜವು ಹಿಂಸಾತ್ಮಕ ಮಾರ್ಗದಲ್ಲಿ ನಡೆಸಿಕೊಂಡಿರುವುದು ದುರಂತವೇ ಸರಿ. ಅದು ಗಾಂಧಿಯವರಿರಲಿ, ಬುದ್ಧ, ಯೇಸುಗಳ ಕಥನಗಳಿರಲಿ, ಇವರ ಮಾರ್ಗ ಮಾನವೀಯತೆಯಾಗಿದ್ದರೂ ಈ ವ್ಯವಸ್ಥೆ ಅವರನ್ನು ಅನುಮಾನದಿಂದ ಕಂಡದ್ದು ಮಾತ್ರ ಘನಘೋರ ಎಂಬ ವಿಷಾದವು ಪ್ರಸ್ತುತ ಕವಿತೆಯಲ್ಲಿ ವ್ಯಕ್ತವಾಗಿದೆ.

**''ಬಡವ ಬಲ್ಲಿದರಿಂದ ನೆಮ್ಮದಿಯ ನಿಟ್ಟುಸಿರು**
**ಆದರೂ ನಿಂತಿಲ್ಲ ದರ್ಪ, ದೌರ್ಜನ್ಯಗಳು**
**ಅದು ಬ್ರಿಟಿಷರು ಬಿಟ್ಟ ಚಾಳಿ**
**ನಿನ್ನ ಜೀವನದಿಂದಲೂ ಕಲಿವರು ಅರಿತಿಲ್ಲ**
**ಅದೇಕೆ ನಡೆದಿದ್ದು ನಿನ್ನ ಹತ್ಯೆ''[6]**

ದೇಶಭಕ್ತರನ್ನು ದೇಶದ್ರೋಹಿಗಳಾಗಿಯೂ, ದೇಶದ್ರೋಹಿಗಳನ್ನು ದೇಶಭಕ್ತರನ್ನಾಗಿಯೂ ಇಂದು ಬಿಂಬಿಸಲಾಗುತ್ತಿದೆ. ಸತ್ಯಗಳು ಸುಳ್ಳುಗಳಾಗಿಯೂ, ಸುಳ್ಳುಗಳನ್ನು ಸತ್ಯಗಳನ್ನಾಗಿಯೂ ಬಿಂಬಿಸಲಾಗುತ್ತಿದೆ. ಇದು ಈ ರಾಷ್ಟ್ರಕ್ಕೆ ಮಾರಕವಾದುದು. ಈ ಹಿನ್ನೆಲೆಯಲ್ಲಿ ರಾಷ್ಟ್ರಪಿತ ಎಂದು ಒಪ್ಪಿಕೊಂಡಿರುವ ಗಾಂಧಿಯನ್ನು ಕೊಂದದ್ದು ಒಮ್ಮೆಯಲ್ಲ, ನಿತ್ಯವೂ ಅವರನ್ನು ಹತ್ಯೆ ಮಾಡುತ್ತಲೇ ಇದ್ದೇವೆ ಎಂಬ ಸೂಕ್ಷ್ಮ ಸಂಗತಿಗಳನ್ನು ಈ ಕವಿತೆ ವಿಶದಪಡಿಸುತ್ತದೆ.

**ಬಾಬಾ ಸಾಹೇಬ್ ಅಂಬೇಡ್ಕರ್**

ಬಾಬಾ ಸಾಹೇಬ್ ಅಂಬೇಡ್ಕರ್ ರವರು ಭಾರತವೆಂಬ ಕಗ್ಗತ್ತಲ ರಾಜ್ಯಕ್ಕೆ ಬೆಳಕು ಕರುಣಿಸಿದ ಮಹಾ ಚೇತನ. ಬಾಬಾ ಸಾಹೇಬರು ಈ ದೇಶದ ಎಲ್ಲ ಜನರಿಗೂ ಸಂವಿಧಾನದ ಮೂಲಕ ಜೀವಿಸುವ ಹಕ್ಕನ್ನು ನೀಡಿದವರಾಗಿದ್ದಾರೆ. ಶತಮಾನಗಳಿಂದ ಶೋಷಣೆಯ ಕೂಪದಲ್ಲಿ ಬದುಕು ಸವೆಸುತ್ತಿರುವ ಸಮುದಾಯಗಳಿಗೆ ಹೊಸ ಚೈತನ್ಯವನ್ನು ತುಂಬಿದ ವ್ಯಕ್ತಿಯಾಗಿದ್ದಾರೆ. ಇಂತಹ ವ್ಯಕ್ತಿತ್ವವು ಕನ್ನಡ ಕಾವ್ಯದಲ್ಲಿ ಮತ್ತೆ ಮತ್ತೆ ಮರುಹುಟ್ಟು ಪಡೆಯುತ್ತಲೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಹೊಸ ತಲೆಮಾರಿನ ಕನ್ನಡ ಮಹಿಳಾ ಕಾವ್ಯವೂ ಸಹ ಬಾಬಾ ಸಾಹೇಬರ

ವ್ಯಕ್ತಿತ್ವವನ್ನು, ಅವರ ಚಿಂತನೆಗಳನ್ನು, ಅವರ ಜೀವನ ಸಾಧನೆಯನ್ನು ಪದಕಟ್ಟಿ ಹಾಡಿರುವುದುಂಟು. ಕಾರಣ, ಅಂಬೇಡ್ಕರ್‌ರವರ ವಿಚಾರ ಧಾರೆಗಳು ಒಂದು ಸಾಹಿತ್ಯ ಚಳುವಳಿಯನ್ನು ಹುಟ್ಟುಹಾಕಿದವು. ಶಿಕ್ಷಣ, ಸಂಘಟನೆ, ಹೋರಾಟವೆಂಬ ಅಸ್ತ್ರದ ಮೂಲಕ ಎಷ್ಟೊ ತಳ ಸಮುದಾಯಗಳು ಮುಖ್ಯವಾಹಿನಿಗೆ ಬರಲು ಮುಂದಾದರು. ಇದಕ್ಕೆ ಪೂರಕವಾಗಿ ಚಳುವಳಿ, ಸಾಹಿತ್ಯ ಮತ್ತು ಸಂಘಟನೆ ಮುಖ್ಯ ಭೂಮಿಕೆಯನ್ನೊದಗಿಸಿಕೊಟ್ಟವು. ಈ ಹಿನ್ನೆಲೆಯಲ್ಲಿ ಶತಮಾನಗಳಿಂದ ಕತ್ತಲ ಕೂಪದಲ್ಲಿದ್ದ ಸಮುದಾಯವೊಂದು ಬೆಳಕನ್ನು ಕಂಡು, ಇಂತಹ ಮಹನೀಯರ ವಿಚಾರ ಧಾರೆಗಳು ಸಾಹಿತ್ಯ ಕೃತಿಗಳಲ್ಲಿ ಮೂಡಿ ಬಂದವು. ಹೀಗೆ ಪ್ರೇರೇಪಣೆಗೆ ಒಳಗಾದ ಹೊಸ ತಲೆಮಾರಿನ ಕವಿಗಳೂ ಸಹ ಅಂಬೇಡ್ಕರ್‌ರವರ ವ್ಯಕ್ತಿತ್ವವನ್ನೂ, ಅವರ ವಿಚಾರ ಧಾರೆಗಳನ್ನು ಕಾವ್ಯದ ಮುಖೇನ ಲೋಕಕ್ಕೆ ದರ್ಶಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಾಗೆ ನೋಡಿದರೆ ಯಾವುದೇ ಶೋಷಿತ ಬರಹಗಾರನು ಬಾಬಾ ಸಾಹೇಬರನ್ನು ಬಿಟ್ಟು ಕಾವ್ಯಕಟ್ಟಲು ಸಾಧ್ಯವಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಬಾಬಾ ಸಾಹೇಬರು ಪ್ರಭಾವಿಸಿರುವುದು ದಿಟ.

ಮಹಿಳಾ ಕಾವ್ಯ ಸಂದರ್ಭದಲ್ಲಿ ಬಾಬಾ ಸಾಹೇಬರ ಬಗೆಗೆ ಕಾವ್ಯ ಬರೆದವರೆಂದರೆ – ಬಿ.ಟಿ. ಲಲಿತಾ ನಾಯಕ್, ಹೆಚ್.ಎಲ್. ಪುಷ್ಪ, ಕೆ. ಷರೀಫಾ, ಬಿ.ಎಸ್. ಮಧುಮತಿ, ಹೆಚ್.ಎಸ್. ಮುಕ್ತಾಯಕ್ಕ, ಕೆ. ರಾಜೇಶ್ವರಿ, ವಿಜಯಶ್ರೀ ಸಬರದ, ಅನುಸೂಯ ಕಾಂಬಳೆ, ಲಲಿತಾ ಸಿದ್ಧಬಸವಯ್ಯ, ವಿಜಯಶ್ರೀ ಹಾಲಡಿ, ಪೂರ್ಣಿಮಾ ಸುರೇಶ್, ದೀಪಾ ಗಿರೀಶ್, ನಳಿನ ಡಿ., ನಾಗರೇಖಾ ಗಾಂವಕರ, ಮಂಜುಳಾ ಹುಲಿಕುಂಟೆ ಮೊದಲಾದವರು ಕವಿತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಪ್ರಾತಿನಿಧಿಕ ಕವಿತೆಗಳನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ.

ಕೆ. ಷರೀಫಾರವರು 'ಅಂಬೇಡ್ಕರ್ ಕುರಿತು' ಎಂಬ ಪದ್ಯದಲ್ಲಿ ಹೀಗೆ ಬರೆಯುತ್ತಾರೆ:

**"ದುಃಸ್ವಪ್ನವಾಗಿ ನೀನು**
**ಮಹಾರಾಷ್ಟ್ರದ ಮಣ್ಣಿಂದ**
**ದಲಿತ ಜನಗಳ ಧ್ವನಿಯಾಗಿ**
**ಹುಟ್ಟಿಬಂದ ವ್ಯಕ್ತಿಯೇ**
**ದಾಸ್ಯ ಸಂಕೋಲೆ ಕಳಚಿ**
**ನೂತನ ಬದುಕು ನಡೆಸಿ**
**ಸ್ವಾಭಿಮಾನದ ಮಂತ್ರವನ್ನು**
**ಹೇಳಿಕೊಟ್ಟ ಧೀರನೇ**
**ನಿನ್ನ ಹೃದಯದ ನೋವು**
**ಭುಗಿಲೆಂದು ಕೆರಳಿ ನಿಂತು**
**ಚರಿತ್ರೆಯ ಪುಟದಲ್ಲಿ ಮಿಂಚಿ**
**ಹೊಸ ತಿರುವು ಕೊಟ್ಟಿತು."[7]**

ಬಾಬಾ ಸಾಹೇಬರ ಜೀವನ ವೃತ್ತಾಂತವನ್ನು ತಿಳಿಸುವ ಈ ಕವಿತೆಯು,

ಶತಮಾನಗಳಿಂದ ಬೆಳಕು ಕಾಣದ ಅಸಂಖ್ಯಾತ ಜನ ಸಮುದಾಯಕ್ಕೆ ಬೆಳಕನ್ನು ಕಂಡರಿಸಿದವನು, ದಾಸ್ಯದ ಸಂಕೋಲೆಯಲ್ಲಿ ಬಂಧಿಯಾಗಿದ್ದ ಜನತೆಯನ್ನು ಸ್ವಾಭಿಮಾನಿಗಳನ್ನಾಗಿ ಮಾಡಿದ ಅಂಬೇಡ್ಕರರು ಚರಿತ್ರೆಯ ಪುಟಗಳಲ್ಲಿ ಹೊಸ ಅಧ್ಯಾಯವೊಂದನ್ನು ಬರೆದವರಾಗಿದ್ದಾರೆ. ದೀನ ದಲಿತರ ಬದುಕಿನ ಬೆಳಕಾಗಿದ್ದಾರೆ ಎಂದು ಷರೀಫಾರವರು ಅಭಿಪ್ರಾಯಿಸುತ್ತಾರೆ.

**"ನನ್ನೂರ ಹೊಲೆಯರ**
**ಹಟ್ಟಿಗೀಗ ಬೆಳಕು ಸುಳಿಯುತ್ತಿದೆ**
**ನೀರೂ ಮುಟ್ಟಿಸದ ಉತ್ತಮರ ಮನೆ ಬಾಗಿಲಲ್ಲಿ ನಿಲ್ಲದ**
**ನನ್ನವ್ವಂದಿರ ಹಟ್ಟಿಗಳಲ್ಲಿ**
**ಭೇದವಿಲ್ಲದ ಗಂಗೆ ಹರಿದು ಪುನೀತಳಾಗುತ್ತಾಳೆ**
**ಕತ್ತಲೆ ಸುತ್ತಿಕೊಂಡ ನನ್ನವರ ಕಾಲ ಸುಕ್ಕುಗಳಿಗೆ**
**ಔಷಧಿಯೂ ದಕ್ಕಿದೆ**
**ಅನ್ನವನ್ನು ಕಾಣದ ಹಬ್ಬಗಳೀಗ**
**ಹೋಳಿಗೆಯ ಘಮದೊಂದಿಗೆ ಬೆರೆತು ಹೋಗುವಾಗ**
**ಬಾಬಾ ಸಾಹೇಬರ ಕನಸುಗಳಾದ ನಾವು**
**ನಮ್ಮ ಮೂತಿಯ ಮೇಲಿನ ಸ್ವಚ್ಛನಗು**
**ಮತ್ತಷ್ಟು ಎಚ್ಚರಗೊಳ್ಳುತ್ತವೆ......."[8]**

ಹೀಗೆ ದಲಿತ ಸಮುದಾಯವು ಒಂದಷ್ಟು ಪ್ರಮಾಣದಲ್ಲಾದರು ಜಾತಿಯ ಶೋಷಣೆ, ದೌರ್ಜನ್ಯದಿಂದ ಮುಕ್ತಿಯನ್ನು ಪಡೆದುಕೊಂಡು ಗುಲಾಮಗಿರಿಯನ್ನು ತೊಡೆದು ಸ್ವಾಭಿಮಾನ ಬದುಕನ್ನು ಕಾಣುತ್ತಿದ್ದಾರೆಂದರೆ ಅದಕ್ಕೆ ಬಾಬಾ ಸಾಹೇಬರೇ ಮುಖ್ಯ ಕಾರಣವೆನ್ನಬಹುದು. ಊರ ಗುಡಿಸಲು ಕೊನೆಯಲ್ಲಿ, ಮರೆಯಲ್ಲಿದ್ದ ಅಂಬೇಡ್ಕರರ ಕನಸುಗಳಾದ ನಾವು ಮತ್ತಷ್ಟು ಎಚ್ಚರಗೊಳ್ಳಬೇಕಾದ ಅನಿವಾರ್ಯತೆಯನ್ನು ಕವಿತೆ ಮನಗಾಣಿಸುತ್ತದೆ.

**"ಎರಡಕ್ಷರ ಎದೆಗಿಳಿಸಿಕೊಂಡ**
**ನನ್ನಂತವರಿಂದು ಯಾರದೋ ಗುಲಾಮರಾಗಿ**
**ನಡು ಬಗ್ಗಿಸುವ ಬದಲು**
**ತಲೆ ಎತ್ತಿ ನಿಂತು ಸ್ವಾಭಿಮಾನದ ಹಾಡ ಹಾಡುತ್ತೇವೆ**
**ಬಿಳಿ ಬಟ್ಟೆಯನ್ನೇ ಕಾಣದಿದ್ದ ನಾವು**
**ಹೊಪ್ಪತ್ತಿನ ಅನ್ನ ಬಟ್ಟೆಗೆ ಸ್ವತಂತ್ರರಾಗಿದ್ದೇವೆಂದರೆ**
**ಅದು ಅಂಬೇಡ್ಕರ್ ಎಂಬ ಆಲದ ನೆರಳಿನ ಆಶಯವಷ್ಟೇ....."[9]**

ಅಂಬೇಡ್ಕರರು ಕೊಟ್ಟ ಮೀಸಲಾತಿಯ ಫಲಾನುಭವಿಗಳಾದ ನಾವು ಇಂದು ಸ್ವಾಭಿಮಾನದ ಬದುಕನ್ನು ಕಾಣುತ್ತಿರುವುದರ ಹಿಂದೆ ಈ ಮಹಾತ್ಮರ ಪರಿಶ್ರಮವಿದೆ. ಆದರೆ ಇಂದು ಯಾವ ಸಮುದಾಯವು ಅಲ್ಪಸ್ವಲ್ಪ ಶಿಕ್ಷಣ ಪಡೆದು ಸ್ವಾವಲಂಬಿಗಳಾಗುತ್ತಿದ್ದಾರೋ ಅದನ್ನು ಸಹಿಸದ ಮನುವಾದಿ ಮನಸ್ಸಿನವರು ಇಂದು ಮೀಸಲಾತಿಯನ್ನು ಪ್ರಶ್ನಿಸುತ್ತಿದ್ದಾರೆ. ಮೀಸಲಾತಿಯೆಂಬುದು ಪ್ರತಿಯೊಬ್ಬ ಶೋಷಿತನೂ ಪಡೆಯುತ್ತಿದ್ದಾನೆ. ಆದರೆ ಕೇವಲ ಷೆಡ್ಯೂಲ್ಡ್ ಕಾಸ್ಟ್ (Scheduled

Castes) ಮಾತ್ರ ಮೀಸಲಾತಿ ಪಡೆಯುತ್ತಿದ್ದಾರೆಂಬಂತೆ ಇತಿಹಾಸ ತಿಳಿಯದ ಅವಿವೇಕಿಗಳು ಈ ಬಗೆಗೆ ಚಕಾರವೆತ್ತುತ್ತಿರುವುದು ವಿಪರ್ಯಾಸವೇ ಸರಿ.

**"ದೇಶ ಮಾರುವ ದೊಡ್ಡವರ ದೌಲತ್ತಿಂದೂ ತಗ್ಗಿದೆ**
**ಜಾತಿ ಹೆಸರಲ್ಲೇ ತಿಂದು ತೇಗುವವರ**
**ದಡೂತಿ ದೇಹಗಳು ಹೆದರುತ್ತವೆಂದರೆ**
**ಅದು ಸಂವಿಧಾನವೆಂಬ ಮನುಷ್ಯ ಧರ್ಮದ ನೆಲೆಯಿಂದಷ್ಟೇ...."[10]**

ಇಂದು ಭಾರತದಲ್ಲಿ ಮನುಷ್ಯನನ್ನು ಮನುಷ್ಯನನ್ನಾಗಿ ಕಾಣಲಾಗುತ್ತಿದೆ ಎಂದರೆ ಅದು ಕೇವಲ ಬಾಬಾ ಸಾಹೇಬರು ಕೊಟ್ಟ ಸಂವಿಧಾನದಿಂದ. ಅಂತಹ ಜಗತ್ತಿನ ಶ್ರೇಷ್ಠವಾದ ಮಾನವೀಯತೆಯನ್ನು ಸಾರುವ, ಜಗತ್ತಿನ ಹಲವು ಸಂವಿಧಾನಗಳಲ್ಲಿ ಮೊದಲ ಸ್ಥಾನದಲ್ಲಿರುವ ನಮ್ಮ ಸಂವಿಧಾನವನ್ನು ಬದಲಿಸುವ ಹೂನ್ನಾರ ಹಾಗೂ ಅದರ ಜಾಗದಲ್ಲಿ ಮನುಧರ್ಮಶಾಸ್ತ್ರವನ್ನು ಜಾರಿಗೆ ತರುವ ಎಲ್ಲ ಹೂನ್ನಾರಗಳು ಪ್ರಯೋಗಾತ್ಮಕವಾಗಿ ಬಾಂಬಿನಂತೆ ಸಿಡಿಸುತ್ತಿರುವುದು ಮನುಷ್ಯ ಸಮಾಜಕ್ಕೆ ತಕ್ಕದ್ದಲ್ಲ ಎಂತಲೇ ಹೇಳಬಹುದು.

ಲಲಿತಾ ಸಿದ್ಧಬಸವಯ್ಯ ಅವರು 'ಅಂಬೇಡ್ಕರ್ ಸರ್‌ಗೆ ಸವರ್ಣೀಯ ಹೆಂಗಸೊಬ್ಬಳ ಪತ್ರ' ಎಂಬ ಕವಿತೆಯಲ್ಲಿ ಹೇಳುವುದೇನೆಂದರೆ, ಬಾಬಾ ಸಾಹೇಬರು ಕೇವಲ ದೀನ ದಲಿತರಿಗೆ ಮಾತ್ರ ಸೀಮಿತವಾದವರಲ್ಲ, ಇಡೀ ಮನುಕುಲಕ್ಕೆ ನ್ಯಾಯ ಒದಗಿಸಿಕೊಟ್ಟಿರುವರೆಂದು ದಾಖಲಿಸುತ್ತಾರೆ.

**"ಸರ್,**
**ಎಲ್ಲರೂ ಅನ್ನುತ್ತಾರೆ**
**ನೀವು ಪಂಚಮರ ಕಣ್ಣು ತೆರೆಸಿದಿರೆಂದು**
**ಹೇಳಿಕೊಟ್ಟಿರಿ ಕುತ್ತಿಗೆಯೆತ್ತಿ ನಡೆಯಬಹುದೆಂದು ಎಂದೂ**
**ಇರಬಹುದು ಸರ್; ಆದರೆ ಇದನ್ನು ಯಾರೊ ಹೇಳುತ್ತಿಲ್ಲ**
**ತೆರೆದದ್ದು ನಮ್ಮ ಕಣ್ಣು ಕೂಡ ಎಂಬುದ"[11]**

ಹೌದು, ಬಾಬಾ ಸಾಹೇಬರನ್ನು ಕೇವಲ ಪಂಚಮರಿಗೆ ಮಾತ್ರ ಸೀಮಿತ ಮಾಡಿ ಮಾತಾಡಿಕೊಳ್ಳುವ ವಿದ್ಯಾವಂತರ ದಂಡೇ ಇದೆ. ಅವರು ಹಾಗೇನಾದರು ತಿಳಿದಿದ್ದರೆ ನಿಜಕ್ಕೂ ಅದು ತಪ್ಪು ಗ್ರಹಿಕೆಯೇ ಸರಿ. ಆದರೆ ಬಾಬಾ ಸಾಹೇಬರು ಮೇಲ್ಜಾತಿ, ಕೆಳ ಜಾತಿ, ಸ್ತ್ರೀ ಕುಲದ ಕಣ್ಣು ತೆರೆಯಿಸಿದ ಮಹನೀಯ ಎಂಬ ಸತ್ಯವನ್ನು ಯಾವ ಹೆಂಗಸೂ ಕೂಡ ಮಾತನಾಡುವುದಿಲ್ಲ ಎಂದು ಲಲಿತಾ ಸಿದ್ಧಬಸವಯ್ಯ ಅವರು ಮರುಕಪಡುತ್ತಾರೆ.

ಎಚ್.ಎಸ್. ಮುಕ್ತಾಯಕ್ಕ ಅವರು 'ಅಂದು-ಇಂದು' ಎಂಬ ಕವಿತೆಯಲ್ಲಿ ಅಂಬೇಡ್ಕರರ ತತ್ವ ಚಿಂತನೆಗಳ ಆಳಕ್ಕಿಳಿದು, ಆಕಾಶಕ್ಕೆ ಏರಿ ಆಲದಂತೆ ಹರಡುತ್ತಿರುವ ಇವತ್ತಿನ ಸಂದರ್ಭದಲ್ಲಿ ಅಂಬೇಡ್ಕರ್ ಹೆಸರೆಂದರೆ ಸಾಕು ಇಂದು ರಕ್ತಸಿಕ್ತವಾಗುವ ಭಯಾನಕ ವಾತಾವರಣ ನಿರ್ಮಾಣವಾಗುತ್ತಿರುವುದರ ಕುರಿತು ಅಭಿವ್ಯಕ್ತಿಸಿದ್ದಾರೆ.

"ಅಂದು: ಕಪ್ಪು ಜನರ ರಕ್ತ/ ಕೆಂಪೆಂದು ತೋರಿಸುತ್ತಾ/ ಎಲ್ಲರ ಗಲ್ಲ ಗುಲಾಬಿ/ ಯಾಗುವುದಕ್ಕೆ ಸವೆದಿರಿ

ಇಂದು: ನಿನ್ನ ರುಂಡ ಮಾತ್ರ/ ಶೋಭಿಸುತ್ತದೆ ಗೋಡೆ/ ಕಾಗದ, ಪತ್ರಿಕೆ ಎಲ್ಲೆಂದರಲ್ಲಿ ಮೂಲೆ ಮೂಲೆಗೆ ನಡುರಸ್ತೆಯಲಿ/ ನೀನು ಪ್ರತಿಮೆಯಾಗಿ/ನಿಂತಿರುವೆ ಇಲ್ಲಿಯ ಕ್ರೌರ್ಯ, ಅನ್ಯಾಯಕ್ಕೆ ಸಾಕ್ಷಿಯಾಗಿ

ನೀನು ಪುಸ್ತಕ ಪ್ರಿಯ/ಶಾಂತಿ ಪ್ರಿಯ ಹೋರಾಟ/ಗಾರನೆಂದು... ನೀನು/ ಅದೂ ಇದೆಲ್ಲ, ಪತ್ರಿಕೆ, ಪುಸ್ತಕದಲ್ಲಿ ಗಟ್ಟಿಯಾಗಿ ನಿಂತುಬಿಟ್ಟಿದೆ –ಎಂದೂ ಎದ್ದು ಬಾರದಂತೆ/ ಚದುರಂಗದ ದಾಳವಾಗಿ ಉರುಳುತ್ತಿರುವಿ ಈ ಜನಗಳ ಕೈಯಲ್ಲಿ/ ಮೂಕವಾಗಿ ನಿಂತ ನಿನ್ನನ್ನು ನೋಡಿದಂತೆ/ ನನಗೆ ಭಾಸವಾಗುತ್ತದೆ/ ಚಾಳೀಸಿನ ಹಿಂದಿನ ನಿನ್ನ ಕಣ್ಣು ಒದ್ದೆಯಾಗುತ್ತಿರುವಂತೆ/ ಮಾತು ಬರದದ್ದಕ್ಕೆ/ ಹಳಹಳಿಸುತ್ತ"[12]

ಇತ್ತೀಚೆಗೆ ಬಾಬಾ ಸಾಹೇಬರ ಹೆಸರನ್ನೂ ಸಹ ಸಹಿಸದ ಮನುವಾದಿ ಮನಸ್ಥಿತಿಯ ಕಿಡಿಗೇಡಿಗಳು ಅಂಬೇಡ್ಕರ್‌ರವರ ಪ್ರತಿಮೆಯ ರುಂಡವನ್ನು ಕತ್ತರಿಸಿದ ಘಟನೆ ಎಲ್ಲ ಮಾಧ್ಯಮಗಳಲ್ಲೂ ಸುದ್ದಿಯಾದದ್ದನ್ನು ನಾವು ಕಂಡಿದ್ದೇವೆ. ಬಾಬಾ ಸಾಹೇಬರು ಈ ಭರತ ಭೂಮಿಗೆ ಹಗಲಿರುಳೂ ಶ್ರಮವಹಿಸಿ ರಾಜ್ಯಭಾರ ಮಾಡಲು ರಾಜ್ಯಾಂಗವನ್ನು ಬರೆದು ಕೊಟ್ಟರು. ದಿಟ್ಟ ಹೋರಾಟಗಾರ, ಪುಸ್ತಕ ಪ್ರೇಮಿ, ಶಾಂತಿ ಪ್ರಿಯ ಇನ್ನೂ ಏನೇನಾಗಿ ಬಾಬಾ ಸಾಹೇಬರನ್ನು ವರ್ಣಿಸಲಾಗಿದೆಯೋ ಅದೆಲ್ಲವೂ ಸಹ ವ್ಯರ್ಥ. ಮನುಕುಲಕ್ಕೆ ಒಳಿತು ಮಾಡಿದ ಮಹನೀಯನ ಪ್ರತಿಮೆಯನ್ನು ನೋಡಿ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದರೆ ಇನ್ನೂ ಎಷ್ಟರ ಮಟ್ಟಿಗೆ ಬಾಬಾ ಸಾಹೇಬರ ಚಿಂತನೆಗಳು ಮನುವಾದಿ ಮನಸ್ಸುಗಳನ್ನು ತಿವಿದಿರಬಹುದು ಎಂಬುದು ತಿಳಿಯುತ್ತದೆ.

**ಉಪಸಂಹಾರ:**

ಕನ್ನಡ ಮಹಿಳಾ ಕಾವ್ಯವು ಚಾರಿತ್ರಿಕ ವ್ಯಕ್ತಿತ್ವಗಳಾದ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಕೇವಲ ಐತಿಹಾಸಿಕ ಸಂಕೇತಗಳಾಗಿ ಮಾತ್ರ ನೋಡದೆ, ಸ್ತ್ರೀಯರ ದೃಷ್ಟಿಕೋನದಿಂದ ಪುನರ್ನಿರ್ಮಿಸಿ, ಸಮಾಜದ ವರ್ತಮಾನ ಸಮಸ್ಯೆಗಳೊಂದಿಗೆ ಸಂಬಂಧಿಸುವ ಮೂಲಕ ಹೊಸ ಆಯಾಮಗಳನ್ನು ಸೃಷ್ಟಿಸಿದೆ. ಬುದ್ಧನ ಸಾಂಸಾರಿಕ ತ್ಯಾಗವನ್ನು ಸ್ತ್ರೀವಾದಿ ನೋಟದಿಂದ ಪ್ರಶ್ನಿಸುವುದು, ಗಾಂಧಿಯ ಅಹಿಂಸೆಯನ್ನು ಇಂದಿನ ದ್ವೇಷದ ವ್ಯಂಗ್ಯದಲ್ಲಿ ಚಿತ್ರಿಸುವುದು, ಮತ್ತು ಅಂಬೇಡ್ಕರ್ ಅವರ ಸಂವಿಧಾನವನ್ನು ಶೋಷಿತರ ಸ್ವಾಭಿಮಾನದ ಬೆಳಕಾಗಿ ಹಾಡುವುದು – ಇವೆಲ್ಲವೂ ಮಹಿಳಾ ಕವಯಿತ್ರಿಯರ ಸೃಜನಶೀಲ ಪ್ರಯತ್ನಗಳು. ಈ ಮೂಲಕ ಕಾವ್ಯವು ಚರಿತ್ರೆಯನ್ನು ಮರುಕಲ್ಪನೆ ಮಾಡಿ, ಸಾಮಾಜಿಕ ನ್ಯಾಯ, ಮಾನವೀಯತೆ ಮತ್ತು ಸ್ತ್ರೀ ಮುಕ್ತಿಯ ಪ್ರಶ್ನೆಗಳನ್ನು ಮುನ್ನೆಲೆಗೆ ತರುತ್ತದೆ. ಅಂತಿಮವಾಗಿ, ಹೊಸ ತಲೆಮಾರಿನ ಮಹಿಳಾ ಕಾವ್ಯವು ಈ ವ್ಯಕ್ತಿಗಳನ್ನು ಜೀವಂತಗೊಳಿಸಿ, ಭವಿಷ್ಯದ ಸಮಾನತೆಯ ಹೋರಾಟಕ್ಕೆ ಪ್ರೇರಣೆಯಾಗುತ್ತದೆ, ಹೀಗೆ ಕನ್ನಡ ಸಾಹಿತ್ಯದಲ್ಲಿ ಹೊಸ ಅಧ್ಯಾಯವನ್ನು

ಬರೆಯುತ್ತದೆ.

**ಕೊನೆ ಟಿಪ್ಪಣಿಗಳು:**

1. ಸೌಮ್ಯ ಕೆ.ಆರ್., (2016) ಬೆಂಕಿಯಲ್ಲೂ ಬಾಡದ ಹೂವು, ಬೆಂಗಳೂರು: ಪ್ರಬುದ್ಧ ಪ್ರಕಾಶನ, ಪು.ಸಂ. 68
2. ಗಿರೀಶ್ ಹಂದಲಗೆರೆ, (2017), ಅರಿವೇ ಅಂಬೇಡ್ಕರ್, ಬೆಂಗಳೂರು: ಅವಿರತ ಪುಸ್ತಕ, ಪು.ಸಂ. 106
3. ಅದೇ, ಪು.ಸಂ. 208
4. ಅದೇ, ಪು.ಸಂ. 208
5. ಅದೇ, ಪು.ಸಂ. 209
6. ಅದೇ, ಪು.ಸಂ. 123
7. ಅದೇ, ಪು.ಸಂ. 66
8. ಅದೇ, ಪು.ಸಂ. 106
9. ಅದೇ, ಪು.ಸಂ. 208
10. ಅದೇ, ಪು.ಸಂ. 208
11. ಅದೇ, ಪು.ಸಂ. 209
12. ಅದೇ, ಪು.ಸಂ. ಪುಟ–123

**ಪರಾಮರ್ಶನ ಗ್ರಂಥಗಳು:**

1. ಶ್ರೀನಿವಾಸರಾಜು ಚಿ. ಮತ್ತು ಸರ್ವಮಂಗಳ ಚ. (ಸಂ), (2012), ಬಿಡುಗಡೆಯ ಬೆಳಕು (1980–2000ರ ಆಯ್ದ ಕವನಗಳು), ಬೆಂಗಳೂರು: ಸಾಹಿತ್ಯ ಅಕಾಡೆಮಿ.
2. ಷರೀಫಾ ಕೆ. (ಸಂ), (2011), ಹೊಸ ಶತಮಾನದ ಕಾವ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ಮಾಧವಿ ಭಂಡಾರಿ ಕೆರೆಕೋಣ (ಸಂ), (2011), ನೀನುಂಟು ನಿನ್ನ ರೆಕ್ಕೆಯುಂಟು, ಬೆಂಗಳೂರು: ಚಿಂತನ ಪುಸ್ತಕ.
4. ಅನುಪಮಾ ಎಚ್.ಎಸ್. (ಸಂ), (2015), ಕಾವ್ಯಬೋಧಿ, ಹೊನ್ನಾವರ: ಕವಿ ಪ್ರಕಾಶನ.
5. ಸಬಿತಾ ಬನ್ನಾಡಿ (ಸಂ), (2017), ಅವಳ ಕವಿತೆ, ಹೊನ್ನಾವರ: ಕವಿ ಪ್ರಕಾಶನ.
6. ಸೌಮ್ಯ ಕೆ.ಆರ್., (2016) ಬೆಂಕಿಯಲ್ಲೂ ಬಾಡದ ಹೂವು, ಬೆಂಗಳೂರು: ಪ್ರಬುದ್ಧ ಪ್ರಕಾಶನ.
7. ಗಿರೀಶ್ ಹಂದಲಗೆರೆ, (2017), ಅರಿವೇ ಅಂಬೇಡ್ಕರ್, ಬೆಂಗಳೂರು: ಅವಿರತ ಪುಸ್ತಕ.